'ಗುರು' ಗ್ರಂಥಮಾಲಿಕೆ : ಖಂಡ ೩

# ಗುರುಗಳ ವರ್ತನೆ, ಕಾರ್ಯ ಮತ್ತು ಗುರುಪರಂಪರೆ

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


| | | |
|---|---|---|
| ೧. | **ಶಿಷ್ಯನಿಗೆ ಜ್ಞಾನ ನೀಡುವ ದೃಷ್ಟಿಯಿಂದ ಗುರುಗಳ ಮಹತ್ವ** | ೧೧ |
| ೨. | **ಗುರುಗಳ ವರ್ತನೆ** | ೧೧ |
| ೩. | **ಗುರುಗಳ ಕಾರ್ಯ** | ೩೧ |
| ೪. | **ಅನ್ನಸಂತರ್ಪಣೆ** | ೪೨ |
| ೫. | **ಪರ್ಯಟನೆ** | ೪೪ |
| ೬. | **ತೀರ್ಥಯಾತ್ರೆ** | ೪೬ |
| ೭. | **ಗುರುಗಳು ಮತ್ತು ಇತರರು** | ೪೮ |
| | * ಶಿಕ್ಷಕರು ಮತ್ತು ಗುರುಗಳು | ೫೦ |
| | * ಪ್ರವಚನಕಾರರು ಮತ್ತು ಗುರುಗಳು | ೫೨ |
| | * ಸಾಮಾನ್ಯ ವ್ಯಕ್ತಿ, ಸಾಧಕರು ಮತ್ತು ಗುರುಗಳು | ೫೩ |
| | * ಸಂತರು ಮತ್ತು ಗುರುಗಳು * ಈಶ್ವರ ಮತ್ತು ಗುರುಗಳು | ೫೩ |
| ೮. | **ಗುರುಗಳನ್ನು ಬುದ್ಧಿಯಿಂದ ಅರಿತುಕೊಳ್ಳುವುದು ಅಸಾಧ್ಯವಾಗಿರುವುದರ ಕಾರಣಗಳು** | ೬೧ |
| ೯. | **ಗುರುಗಳನ್ನು ಇತರ ಗುರುಗಳೊಂದಿಗೆ ತುಲನೆ ಮಾಡಿದರೆ ಸಾಧನೆಯಲ್ಲಿ ಉನ್ನತಿಯಾಗುವುದಿಲ್ಲ** | ೬೨ |
| ೧೦. | **ಗುರುಗಳ ದೃಷ್ಟಿಕೋನದಲ್ಲಿ ಗುರುಗಳು !** | ೬೫ |
| | * ಗುರುಗಳು ಯಾರಿಗೆ ಗುರುಪದವಿಯನ್ನು ಕೊಡುತ್ತಾರೆ ? | ೬೫ |
| | * ಆಶೀರ್ವಾದ ನೀಡುವಾಗಿನ ಭಾವ | ೬೭ |
| | * ಗುರುಗಳ ಶಿಷ್ಯಭಾವ | ೬೮ |
| | * ಗುರು-ಶಿಷ್ಯ ಸಂಬಂಧದ ಬಗೆಗಿನ ದೃಷ್ಟಿಕೋನ | ೬೮ |
| ೧೧. | **ಗುರುಪರಂಪರೆ** | ೬೯ |
| | * ಗುರು ಪರಂಪರೆಯು ನಿಂತು ಹೋಗುವುದು | ೬೯ |
| ೧೨. | **ಗುರುಗಳ ಆಸನ ಮತ್ತು ಗುರುಪಾದುಕೆಗಳು** | ೭೧ |
| ೧೩. | **ಗುರುಗಳ ಸಂಖ್ಯೆ ಮತ್ತು ಭಾರತದ ಮಹತ್ವ** | ೭೩ |
| ೧೪. | **ಇತರ ಯೋಗಮಾರ್ಗಗಳೊಂದಿಗೆ ಗುರುಕೃಪಾಯೋಗದ ತುಲನೆ** | ೭೩ |

## ಮನೋಗತ

ಗುರುಗಳು ಜ್ಞಾನಿಗಳ ರಾಜರಾಗಿದ್ದಾರೆ ಎಂದು ಸಂತ ಜ್ಞಾನದೇವರು ಹೇಳಿದ್ದಾರೆ. ಯಾರು ಜ್ಞಾನವನ್ನು ಕೊಡುತ್ತಾರೆಯೋ, ಅವರೇ ಗುರುಗಳು ! ಶಿಲೆಯಿಂದ ಶಿಲ್ಪವು ತಯಾರಾಗಬಹುದು; ಆದರೆ ಅದಕ್ಕೆ ಶಿಲ್ಪಿ ಬೇಕಾಗುತ್ತಾನೆ. ಅದೇರೀತಿ ಸಾಧಕರು ಮತ್ತು ಶಿಷ್ಯರು ಈಶ್ವರನನ್ನು ಪ್ರಾಪ್ತಗೊಳಿಸಿಕೊಳ್ಳಬಲ್ಲರು; ಆದರೆ ಅದಕ್ಕೆ ಗುರುಗಳ ಆವಶ್ಯಕತೆಯಿರುತ್ತದೆ. ಗುರುಗಳು ತಮ್ಮ ಬೋಧಾಮೃತದಿಂದ ಸಾಧಕರ ಮತ್ತು ಶಿಷ್ಯರ ಅಜ್ಞಾನವನ್ನು ದೂರಗೊಳಿಸಿದ ನಂತರವೇ ಅವರಿಗೆ ಈಶ್ವರಪ್ರಾಪ್ತಿಯಾಗುತ್ತದೆ.

ಸಾಧಕರು ಮತ್ತು ಶಿಷ್ಯರು ಸಾಧನೆಯನ್ನು ಮಾಡುವಾಗ ಅವರು ಏನು ಮಾಡಬೇಕು, ಏನು ತ್ಯಜಿಸಬೇಕು ಮುಂತಾದವುಗಳ ಅರಿವನ್ನು ಗುರುಗಳು ಮಾಡಿಕೊಡುತ್ತಾರೆ. ಗುರುಗಳು ಕೇವಲ ಉಪದೇಶದಿಂದ ಮಾತ್ರವಲ್ಲದೇ ಸಾಮಾನ್ಯವೆನಿಸುವ ನಡೆ-ನುಡಿಗಳಿಂದಲೂ ತುಂಬಾ ವಿಷಯಗಳನ್ನು ಕಲಿಸುತ್ತಾರೆ. ಸಾಧಕರಿಗೆ ಮತ್ತು ಶಿಷ್ಯರಿಗೆ ಗುರುಗಳ ನಡೆ-ನುಡಿಗಳ ಭಾವಾರ್ಥ ತಿಳಿಯದಿದ್ದರೆ ಅವರು ಗುರುಗಳ ಅಮೂಲ್ಯ ವಿಚಾರಗಳಿಂದ ವಂಚಿತರಾಗುತ್ತಾರೆ. ಪ್ರಸ್ತುತ ಗ್ರಂಥದಲ್ಲಿ ಗುರುಗಳ ವರ್ತನೆಯ ಬಗ್ಗೆ (ಉದಾ. ಗುರುಗಳ ಸಹಜ ಮಾತುಕತೆ, ಗುರುಗಳು ಗದರಿಸುವುದು) ಮತ್ತು ಅವರು ಶಿಷ್ಯರಿಗೆ ಮಾಡುತ್ತಿರುವ ಸಹಾಯದ ಬಗ್ಗೆ ಸಾಂಗವಾಗಿ ವಿವೇಚನೆ ಮಾಡಲಾಗಿದೆ.

ಶಿಕ್ಷಕರು, ದೇವತೆಗಳು ಮತ್ತು ಗುರುಗಳಲ್ಲಿ ಇರುವ ವ್ಯತ್ಯಾಸವೇನು ? ಗುರುಗಳು ತಮ್ಮ ನಂತರ ಯಾರನ್ನು ಗುರುಪದವಿಯಲ್ಲಿ ನಿಯುಕ್ತಿಗೊಳಿಸುತ್ತಾರೆ ? 'ಭಾರತ'ವನ್ನು ಜಗತ್ತಿನ 'ಆಧ್ಯಾತ್ಮಿಕ ಗುರು' ಎಂದೇಕೆ ಹೇಳುತ್ತಾರೆ ? ಮುಂತಾದವುಗಳನ್ನು ಸಹ ಈ ಗ್ರಂಥದಲ್ಲಿ ಸಾಂಗವಾಗಿ ಚರ್ಚಿಸಲಾಗಿದೆ.

'ದೇವಾ ತೂಚಿ ಗಣೇಶು । ಸಕಲ ಮತೀ ಪ್ರಕಾಶು ॥' ಎಂದು ಸಂತ ಜ್ಞಾನದೇವರು ಪ್ರಾರ್ಥನೆಯನ್ನು ಮಾಡಿದ್ದಾರೆ. ದೇವರಿಗೆ ಸಮಾನರಾದ ಶ್ರೀ ಗುರುಗಳು ಶಿಷ್ಯರ ಮತಿಯನ್ನು ಪ್ರಕಾಶಮಾನಗೊಳಿಸದೇ, ಶಿಷ್ಯನಿಗೆ ಗುರುಗಳಿಂದ ಜ್ಞಾನವನ್ನು ಗ್ರಹಿಸುವುದು ಅಥವಾ ಕಲಿಯುವುದು ಸಾಧ್ಯವಾಗುವುದಿಲ್ಲ.

'ಈ ಗ್ರಂಥದ ಮೂಲಕ ಜಿಜ್ಞಾಸುಗಳು, ಸಾಧಕರು ಮತ್ತು ಶಿಷ್ಯರು ಸಾಧನೆಗೆ ಆವಶ್ಯಕವಿರುವ ಜ್ಞಾನವನ್ನು ಉತ್ತಮ ರೀತಿಯಲ್ಲಿ ಅಳವಡಿಸಿಕೊಳ್ಳಲಿ ಮತ್ತು ಅವರ ಪ್ರಯಾಣವು ಈಶ್ವರಪ್ರಾಪ್ತಿಯ ಕಡೆಗೆ ಶೀಘ್ರವಾಗಿ ಆಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

**ಓದಿ ಸನಾತನದ ಗ್ರಂಥ 'ಶಾಂತ ನಿದ್ರೆಗಾಗಿ ಏನು ಮಾಡಬೇಕು ?'**